**3 ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.**

**<u>ಸಿ.ಸಿ.ನಂ. 649/2019</u>**

**ದಿನಾಂಕಃ 18.02.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು ಃ | ಕೆಂಪೇಗೌಡರ್ | ಚಾಸಾ-1, ಪ್ರಾಸ.-1 |
| ತಂದೆಯ  ಹೆಸರು ಃ | ಲೇಟ್ ನಿಂಗಪ್ಪ | |
| ವಯಸ್ಸು ಃ | 73 ವರ್ಷ | |
| ಉದ್ಯೋಗ ಃ | ನಿವೃತ್ತ ನ್ಯಾಯಾಧೀಶರು | |
| ವಾಸ ಃ | ದೇವರಹಳ್ಳಿ ಕಾವಲು | |

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>

ಮೃತ 1 ಮತ್ತು ನ್ಯಾಯಾಲಯದ ಮುಂದಿರುವ 2 ನೇ ಆರೋಪಿ ಗೊತ್ತು.  ಆರೋಪಿ 3 ರಿಂದ 5 ರವರು ನನಗೆ ಗೊತ್ತಿಲ್ಲ.  ಚಾಸಾ-2 ಮತ್ತು  3, 10, 11 ರವರು ನನಗೆ ಪರಿಚಯ.

ದಿಃ 04.12.2017 ಮತ್ತು 05.12.2017 ರ ಮಧ್ಯರಾತ್ರಿಯಲ್ಲಿ ನಮ್ಮ ತೋಟದ ಮನೆಯ ಮುಂಭಾಗದಲ್ಲಿ ಅಡಿಕೆ ದಬ್ಬೆಯಿಂದ ಮಾಡಿದ ಶೆಡ್ ನಲ್ಲಿ ಒಣ ಕೊಬ್ಬರಿಯನ್ನು ಸುಲಿಸಿ ಸಂಗ್ರಹಿಸಲಾಗಿತ್ತು.   ಸದರಿ ಕೊಬ್ಬರಿಯ ಪೈಕಿ ಸುಮಾರು ಅಂದಾಜು ರೂ. 50,000 -60,000 ಮೌಲ್ಯವಿರುವ 10 ಚೀಲಗಳಷ್ಟು ಕೊಬ್ಬರಿ ಕಳುವಾಗಿರುತ್ತದೆ.  ಬೆಳಗ್ಗೆ ಬೀರೂರು ಪೋಲಿಸ್ ಠಾಣೆಗೆ ಹೋಗಿ ಆರೋಪಿತರನ್ನು ಪತ್ತೆ ಹಚ್ಚಿ ಕ್ರಮವಹಿಸಬೇಕಾಗಿ ದೂರು ನೀಡಿರುತ್ತೇನೆ.   ಸಾಕ್ಷಿಯು ದಿಃ 05.12.2017 ರಂದು ಪೋಲಿಸರಿಗೆ ನೀಡಿರುವ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು, ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.   ಅದೇ ದಿನ ಸಂಜೆ 4.00 ರಿಂದ 5.00 ಗಂಟೆ ಸಮಯದಲ್ಲಿ ಪೋಲಿಸರು ಸ್ಥಳಕ್ಕೆ ಬಂದು ಕೃತ್ಯ ನಡೆದ ಸ್ಥಳದ ಮಹಜರ್ ಕ್ರಮ ಜರುಗಿಸಿರುತ್ತಾರೆ.  ಆ ಸಮಯದಲ್ಲಿ ಚಾಸಾ-2 ಮತ್ತು 3 ರವರು ಹಾಜರಿದ್ದರು.   ಸಾಕ್ಷಿಯು ದಿಃ 05.12.2017 ರ ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು, ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಮಹಜರ್ ಸಮಯದಲ್ಲಿ ತೆಗೆದ ಛಾಯಾಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು ಗುರುತಿಸಲಾಯಿತು.

ನಂತರ ಕಳುವಾದ ಮಾಲನ್ನು ಪೋಲಿಸರು ಪತ್ತೆ ಮಾಡಿರುವುದನ್ನು ತಿಳಿದು ದಿಃ 10.01.2018 ರಂದು ಪೋಲಿಸರು ಜಪ್ತಿ ಮಾಡಿರುವ ಕೊಬ್ಬರಿಯನ್ನು ನ್ಯಾಯಾಲಯದ ಆದೇಶದ ಮೇರೆಗೆ ಬಿಡುಗಡೆ ಮಾಡಿಸಿಕೊಂಡಿರುತ್ತೇನೆ.   ಆ ಸಮಯದಲ್ಲಿ ನನ್ನ ಜೊತೆ ಚಾಸಾ-10 ಮತ್ತು 11 ರವರು ಹಾಜರಿದ್ದರು.  ಆ ಸಮಯದಲ್ಲಿ ಪೋಲಿಸರು ಮಹಜರ್ ಕ್ರಮವನ್ನು ಸಂಜೆ 7.00 ಗಂಟೆಗೆ ಜರುಗಿಸಿರುತ್ತಾರೆ.   ಸಾಕ್ಷಿಯು ಸದರಿ ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-4 ಎಂದು, ಸಾಕ್ಷಿ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.   ಆ ಸಮಯದಲ್ಲಿ ತೆಗೆಯಲಾದ ಛಾಯಾಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-5 ಎಂದು ಗುರುತಿಸಲಾಯಿತು.    ಸಾಕ್ಷಿ ನ್ಯಾಯಾಲಯದ ಮುಂದಿರುವ 2 ನೇ ಆರೋಪಿಯನ್ನು

ನೋಡಿ ಗರುರುತಿಸಿರುತ್ತಾರೆ.

<u>**ಪಾಟೀಸವಾಲುಃ ಶ್ರೀ ಎಂ ಎಸ್ ಬಿ ಆರೋಪಿ ಪರ ವಕೀಲರಿಂದಃ**</u>

2 ನೇ ಆರೋಪಿಯು ನನ್ನ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಎಂದರೆ ಸರಿ. 2 ನೇ ಆರೋಪಿಯು ನನ್ನ ಮನೆ ಕೆಲಸಕ್ಕೆ ಬಾರದಿದ್ದಕ್ಕೆ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರು ಆರೋಪಿತರ ಹೆಸರುಗಳನ್ನು ಹೇಳಿದ ನಂತರ ಇವರೇ ಆರೋಪಿತರು ಎಂದು ತಿಳಿಯಿತು ಎಂದರೆ ಸರಿ. ನನಗೆ ಮಹಜರ್ ನಲ್ಲಿ ಬರೆದಿರುವ ವಿಚಾರಗಳು ತಿಳಿಯದಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನನ್ನ ಮನೆಯ ಶೆಡ್ ನಿಂದ ಕಳ್ಳತನ ಮಾಡದಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>**ಮರು ವಿಚಾರಣೆ : ಇಲ್ಲ**</u>

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ ಎ ಒ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದಃನ್ಯಾಃದಂ.,ರವರು, ಕಡೂರು.